**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.684/2014**

**ಪಿ.ಡಬ್ಲ್ಯೂ: 15**

**ಸಿ.ಡಬ್ಲ್ಯೂ: 16**

ಸಾಕ್ಷಿದಾರರ **ಹೆಸರು** : ನೇತ್ರಮ್ಮ

ಗಂಡನ **ಹೆಸರು** : ನಾಗರಾಜ್

**ವಯಸ್ಸು** : 40 **ವರ್ಷ**

**ಉದ್ಯೋಗ** : ಮಹಿಳಾ ಹೆಚ್ ಸಿ

**ವಾಸಸ್ಥಳ** : ತರೀಕೆರೆ

**ದಿನಾಂಕ: 01-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

ನಾನು **2010** ರಿಂದ **2017** ರವರೆಗೆ ಲಕ್ಕವಳ್ಳಿ ಪೋಲೀಸ್ ಠಾಣೆಯಲ್ಲಿ ಮಹಿಳಾ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:**26/03/2016** ರಂದು ಬೆ: **11** ರಿಂದ **12-10** ರವರೆಗೆ ಲಕ್ಕವಳ್ಳಿ ಪೋಲೀಸ್ ಠಾಣೆಯಲ್ಲಿ ನಿವೇಶನದ ವಿಚಾರವಾಗಿ ಆರೋಪಿತರು ದಾಖಲೆಗಳನ್ನು ದುರುಪಯೋಗಪಡಿಸಿ ಸೃಷ್ಟಿಸಿರುವ ಬಗ್ಗೆ ಚಾಸಾ-**15** ಮತ್ತು **13** ರವರ ಸಮಕ್ಷಮ ಚಾಸಾ-**14** ರವರು ಹಾಜರುಪಡಿಸಿದ ದಾಖಲೆಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ನಾನು ಮಹಜರನ್ನು ಬರೆದಿರುತ್ತೇನೆ. ಸಾಕ್ಷಿಗೆ ಮಹಜರ್ ಪ್ರತಿ ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಮಹಜರನ್ನು ನಿಪಿ-**8** ಎಂದು, ಸಹಿಯನ್ನು ನಿಪಿ-**8**(ಎ) ಎಂದು ಗುರುತಿಸಲಾಯ್ತು.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಎ ಆರ್ ಕೆ **ವಕೀಲರಿಂದ.**

ನಾನು ಮಹಜರ್ ಬರೆದಿರುವ ಕಾಲಕ್ಕೆ ಫೋಟೋ ತೆಗೆದಿಲ್ಲ ಎಂದರೆ ಸರಿ. ನಾನು ಮಹಜರ್ ಬರೆಯುವಾಗ ಸಾಕ್ಷಿದಾರರು ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-**14** ರವರು ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ನಮ್ಮ ಹಿರಿಯ ಅಧಿಕಾರಿಗಳು ಹೇಳಿದ್ದಕ್ಕೆ ನಾನು ಮಹಜರ್ ಬರೆದಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**